**<u>ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.</u>**

**<u>ಎಸ್.ಸಿ ಸಂಖ್ಯೆ– 252/2022</u>**

| | | |
|---|---|---|
| **ಸಾಕ್ಷಿದಾರನ ಹೆಸರು** | : ಫೈರೋಜ್ ಖಾನ್ | **ಪಿ.ಡಬ್ಲ್ಯೂ– 2** |
| **ತಂದೆಯ ಹೆಸರು** | : ಬಾಬಜಾನ್ | **ಸಿ.ಡಬ್ಲ್ಯೂ– 7** |
| **ವಯಸ್ಸು** | : 40 ವರ್ಷ | |
| **ಉದ್ಯೋಗ** | : ಆಟೋ ಚಾಲಕ | |
| **ವಾಸಸ್ಥಳ** | : ಬಡಮಕಾನ್, ಟಿಪ್ಪು ಸರ್ಕಲ್, ಮೈಸೂರು. | |

**<u>ಸಾಕ್ಷಿಯನ್ನು ಈ ದಿನ ದಿಃ20.02.2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-</u>**

**1.** ನಾನು ದಾಖಲೆಗೆ ಸಹಿ ಮಾಡುತ್ತೇನೆ. ನನ್ನ ಸಹಿಯನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ತನ್ನ ಸಹಿ ಇರುವ ದಾಖಲೆಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆ ಅಮಾನತ್ತು ಮಹಜರ್ (ದೃಡೀಕೃತ ನಕಲು ಪ್ರತಿ) ಆಗಿದ್ದು, ಅದನ್ನು ನಿಶಾನೆ ಪಿ–5 ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ಸಹಿ ಮಾಡಿ ಈಗ 13 ರಿಂದ 14 ವರ್ಷ ಆಗಿರುತ್ತದೆ. ಸದರಿ ದಾಖಲೆಗೆ ಸಿಸಿಬಿ ಕಚೇರಿಯಲ್ಲಿ ಸಹಿ ಮಾಡಿರುತ್ತೇನೆ. ನಾನು ಸಿಸಿಬಿ ಕಚೇರಿಯ ಬಳಿ ಆಟೋವನ್ನು ನಿಲ್ಲಿಸಿಕೊಳ್ಳುತ್ತಿದ್ದು, ಆದ್ದರಿಂದ ನನಗೆ ಸಿಸಿಬಿಯವರು ಯಾವುದೋ ಮಹಜರ್ ಮಾಡಿರುತ್ತೇವೆ, ಸಹಿ ಮಾಡು ಎಂದು ಹೇಳಿದ್ದು ಸಹಿ ಮಾಡಿರುತ್ತೇನೆ.

**2.** ನನ್ನನ್ನು ಎಲ್ಲಿಯೂ ಕೂಡ ಪೊಲೀಸರು ಕರೆದುಕೊಂಡು ಹೋಗಿರುವುದಿಲ್ಲ. ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ಪೊಲೀಸರು ನನ್ನ ಹೇಳಿಕೆಯನ್ನು ದಾಖಲಿಸಿಕೊಂಡಿರುವುದಿಲ್ಲ. ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿಯನ್ನು ನಾನು ನೋಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಕೋರಿದ್ದು, ಸದರಿಯವರ ಕೋರಿಕೆಯನ್ನು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ನೀಡಿದೆ.)

**ಪಾಟೀ ಸವಾಲುಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

**3.** ನನಗೆ ಚಾ.ಸಾಃ6 ನದೀಮ್‌ರವರ ಪರಿಚಯ ಇರುವುದಿಲ್ಲ. ದಿಃ-28.08.2024 ರಂದು ನನ್ನನ್ನು ಮತ್ತು ಚಾ.ಸಾಃ6 ರವರನ್ನು ಬೆಳಿಗ್ಗೆ ಸಿಸಿಬಿ ಕಚೇರಿಗೆ ಕರೆಸಿಕೊಂಡಿದ್ದರು ಎಂದರೆ ಸರಿಯಲ್ಲ. ನಾನು ಸಿಸಿಬಿ ಕಚೇರಿಗೆ ಹೋದಾಗ ಅಲ್ಲಿ 1 ರಿಂದ 3 ನೇ ಆರೋಪಿತರು ಇದ್ದು, ಅವರು ಅನೇಕ ಪ್ರಕರಣಗಳಲ್ಲಿ ಚಿನ್ನ-ಬೆಳ್ಳಿ ಕಳ್ಳತನ ಮಾಡಿದ್ದರಿಂದ ಅವರನ್ನು ವಶಕ್ಕೆ ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. ಸದರಿ ಆರೋಪಿಗಳು ತಾವು ಕದ್ದ ಚಿನ್ನ ಮತ್ತು ಬೆಳ್ಳಿಯನ್ನು ಮಾರಾಟ ಮಾಡಿದ್ದು, ಸದರಿ ಮಾರಾಟ ಮಾಡಿದ ಅಂಗಡಿಯನ್ನು ಮತ್ತು ಚಿನ್ನ-ಬೆಳ್ಳಿ ಒಡವೆಗಳನ್ನು ತೋರಿಸುತ್ತೇವೆ ಎಂದು ಹೇಳಿದ್ದರಿಂದ ಅಲ್ಲಿ ಮಹಜರ್ ಮಾಡಲು ಸಾಕ್ಷಿದಾರರಾಗಿ ನಮ್ಮನ್ನು ಕೇಳಿಕೊಂಡಿದ್ದು, ನಾವು ಆಗ ಒಪ್ಪಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

**4.** ನಾನು, ಚಾ.ಸಾಃ6, ಪೊಲೀಸರು ಮತ್ತು ಸದರಿ ಆಸಾಮಿಗಳು ಎಲ್ಲರೂ ಹೆಚ್.ಡಿ ಕೋಟೆಗೆ ಬೆಳಿಗ್ಗೆ ಹೋಗಿ ನಂತರ ಮಧ್ಯಾಹ್ನ ಮೈಸೂರಿಗೆ ಬಂದಿರುತ್ತೇವೆ ಎಂದರೆ

ಸರಿಯಲ್ಲ. ನಂತರ ನಾನು, ಚಾ.ಸಾಃ6, ಪೊಲೀಸರು ಮತ್ತು ಸದರಿ ಆಸಾಮಿಗಳು ಮೈಸೂರಿನ ಅಶೋಕ ರಸ್ತೆಯಲ್ಲಿರುವ ಬಿ.ಜೆ ಜ್ಯೂವಲರಿ ಅಂಗಡಿಗೆ ಹೋಗಿದ್ದು, ಅಲ್ಲಿ 2 ನೇ ಆರೋಪಿ ತಾವುಗಳು ಕದ್ದ ಬೆಳ್ಳಿ ಮತ್ತು ಚಿನ್ನದ ಆಭರಣಗಳನ್ನು ಸದರಿ ಅಂಗಡಿಯಲ್ಲಿ ಮಾರಾಟಮಾಡಿದ್ದು, ಅಲ್ಲಿ ಇದ್ದ 6 ನೇ ಆರೋಪಿಯನ್ನು ತೋರಿಸಿ ಅವರಿಗೆ ಕದ್ದ ಬೆಳ್ಳಿ ಮತ್ತು ಚಿನ್ನದ ಆಭರಣಗಳನ್ನು ಮಾರಾಟ ಮಾಡಿರುತ್ತೇವೆ ಎಂದು ತಿಳಿಸಿ, 6 ನೇ ಆರೋಪಿಗೆ ತಾನು 7–8 ಬಾರಿ ಕದ್ದ ವಸ್ತುಗಳನ್ನು ಮಾರಾಟ ಮಾಡಿದ್ದು, ಅವುಗಳನ್ನು ಪೊಲೀಸರ ಮುಂದೆ ಹಾಜರುಪಡಿಸುವಂತೆ ಕೇಳಿಕೊಂಡಾಗ, 6 ನೇ ಆರೋಪಿ ಈ ಪ್ರಕರಣಕ್ಕೆ ಸೇರಿದ 7 ವಸ್ತುಗಳನ್ನು ಸೇರಿ ಒಟ್ಟು 20 ಆಭರಣಗಳನ್ನು ಹಾಜರುಪಡಿಸಿರುತ್ತಾರೆ ಎಂದರೆ ಸರಿಯಲ್ಲ.

5. ನಂತರ ಸದರಿ 20 ವಸ್ತುಗಳನ್ನು ಸದರಿ ಅಂಗಡಿಯಲ್ಲಿ ಮಹಜರನ್ನು ಮದ್ಯಾಹ್ನ 2 ರಿಂದ 4 ಗಂಟೆಯವರೆಗೆ ಜರುಗಿಸಿ ಪೊಲೀಸರು ನಮ್ಮ ಸಮಕ್ಷಮ ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಚಿನ್ನದ ಅಂಗಡಿಯಲ್ಲಿ ಮಹಜರಿನ ವಿಚಾರ ಕೇಳಿಕೊಂಡು ನಾನು ಮಹಜರಿಗೆ ಸಹಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆ ಭಾಗವನ್ನು ನಿಶಾನೆ ಪಿ–6 ಎಂದು ಗುರುತಿಸಲಾಯಿತು. ನಂತರ ಪೊಲೀಸರು ಸದರಿ ಮಹಜರಿಗೆ ಸಂಬಂಧಪಟ್ಟ ನನ್ನ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಎಲ್ಲಾ ವಿಚಾರ ತಿಳಿದಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ–**

**ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳುತ್ತಾರೆ.**

ಮರುವಿಚಾರಣೆಃ**–** ಇಲ್ಲ

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು**)**

**ಓ ಹೇ ಕೇ ಸ ಇ ಎ ಒ**

**Sd/-**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಮೈಸೂರು.**